C.C.No.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಜಗಳೂರು

ಸಿ. ಸಿ . ನಂಃ *291/2018*

ಫಿರ್ಯಾದಿದಾರಃ ಸರ್ಕಾರದ ಪರವಾಗಿ - ಬಿಳಿಚೋಡು ಪೋಲೀಸ್ ಠಾಣೆ.

ವಿರುದ್ಧ

ಆರೋಪಿತರುಃ

1. ಗಿಡ್ಡ ಹನುಮಕ್ಕ ಬಿನ್ ಹನುಮಂತಪ್ಪ,
   ವಯಸ್ಸುಃ 36 ವರ್ಷಗಳು,
2. ನಾಗರಾಜ ಬಿನ್ ಪಾಲಪ್ಪ,
   ವಯಸ್ಸುಃ 30 ವರ್ಷಗಳು,
3. ನಾಗರಕಟ್ಟೆ ಚಂದ್ರಪ್ಪಬಿನ್ ಹೊಟ್ಟೋಬ್ಬಜ್ಜರ ಓಬಪ್ಪ,
   ವಯಸ್ಸುಃ 38 ವರ್ಷಗಳು,
4. ಮಲ್ಲೇಶಪ್ಪ ಬಿನ್ ಹನುಮಂಪ್ಪ,
   ವಯಸ್ಸುಃ 47 ವರ್ಷಗಳು,
5. ಆಲದಹಳ್ಳಿರವಿ ಬಿನ್ ಭೀಮಪ್ಪ,
   ವಯಸ್ಸುಃ 36 ವರ್ಷಗಳು,
6. ಗೌರಕ್ಕರ ಮಂಜಪ್ಪ ಬಿನ್ ಹನುಮಂತಪ್ಪ,
   ವಯಸ್ಸುಃ 40 ವರ್ಷಗಳು,
7. ನಾಗಪ್ಪ ಬಿನ್ ಭೀಮಪ್ಪ,
   (ಮೃತಿಯಾಗಿರುತ್ತಾರೆ)

ಎಲ್ಲರೂ ವಾಸಃ ಮಾಗಡಿ ಗ್ರಾಮ, ಜಗಳೂರು ತಾಲ್ಲೂಕು.

ಃಃ ದೋಷಾರೋಪಣೆ ಃಃ

ಮಹೇಂದ್ರ ಎಂ. ಬಿ. ಎ. ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತುತ ಪ್ರಥಮ ದಜೆರ್ ನ್ಯಾಯಿಕ ದಂಡಾಧಿಕಾರಿ, ಜಗಳೂರು ಆದ ನಾನು ರಾ ಮೂಲಕ ನಿಮ್ಮ ಮೇಲೆ ಹೊರಿಸಿದ ಆಪಾದನೆ ಏನಂದರೆ,

ದಿಃ20-06-2017 ರಂದು ಬೆಳಗ್ಗೆ 11-00 ಗಂಟೆ ಸಮಯದಲ್ಲಿ ಸಮಯದಲ್ಲಿ ಬಿಳಿಚೋಡು ಪೋಲೀಸ್ ಠಾಣಾ ವ್ಯಾಪ್ತಿಯ, ಮಾಗಡಿ ಗ್ರಾಮದ ರಿ. ಸರ್ವೆ ನಂಃ 28 ರ ಸರ್ಕಾರಿ ಜಮೀನಿನಲ್ಲಿ ಸಾಕ್ಷಿ-1 ರಿಂದ 11 ರವರು ಉಳುಮೆ ಮಾಡುತ್ತಿರುವಾಗ, ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೊದ್ದೇಶದಿಂದ ಸಾಕ್ಷಿ-1 ರಿಂದ 11 ರವರ ಮೇಲೆ ಅಕ್ರಮ ಗುಂಪುಕಟ್ಟಿಕೊಂಡು ಬಂದಿರುತ್ತೀರಾ ಆದ್ದರಿಂದ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾಂ. ದಂ.ಸಂ. ಕಲಂ 143 ಸಹವಾಚಕ ಕಲಂ 149 ರಡಿಯಲ್ಲಿ

ಶಿಕ್ಷಾರ್ಹ ವಾದ ಅಪರಾಧ ಮಾಡಿರುತ್ತೀರಾ ಎಂದು ಆಪಾದಿಸಲಾಗಿರುತ್ತದೆ.

ಈ ಮೇಲೆ ಹೇಳಿದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೊದ್ದೇಶದಿಂದ ಸಾಕ್ಷಿ-1 ರಿಂದ 11 ರವರಿಗೆ ಸೂಳೇಮಕ್ಕಳಾ, ಬೋಳಿಮಕ್ಕಳಾ ಇದು ನಮ್ಮ ಗ್ರಾಮಕ್ಕೆ ಸೇರಿದ ಜಮೀನು ಎಂದು ಅವಾಚ್ಯ ಶಬ್ದಗಳಿಂದ ಬೈದು, ಸಾರ್ವಜನಿಕ ಶಾಂತತಗೆ ಭಂಗವನ್ನುಂಟು ಮಾಡಿ ನ್ಯಾಯಾಲಯದ ಸಂಜ್ಞೆಯೊಳಗೆ ಭಾಂ. ದಂ.ಸಂ. ಕಲಂ 504 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ವಾದ ಅಪರಾಧ ಮಾಡಿರುತ್ತೀರಾ ಎಂದು ಆಪಾದಿಸಲಾಗಿರುತ್ತದೆ.

ಈ ಮೇಲೆ ಹೇಳಿದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೊದ್ದೇಶದಿಂದ ಸಾಕ್ಷಿ-1 ರಿಂದ 11 ರವರಿಗೆ ಇಲ್ಲಿ ಬೇರೆಯವರಿಗೆ ಉಳುಮೆ ಮಾಡಲು ಬಿಡುವುದಿಲ್ಲ, ಇಲ್ಲಿಂದ ಹೋದರೆ ಸರಿ ಇಲ್ಲಾ ಅಂದರೆ ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆಯನ್ನುಂಟು ಮಾಡಿರುತ್ತೀರಾ. ಆದ್ದರಿಂದ ಆರೋಪಿತರಾದ ನೀವೆಲ್ಲರೂ ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾಂ. ದಂ.ಸಂ. ಕಲಂ 506 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ವಾದ ಅಪರಾಧ ಮಾಡಿರುತ್ತೀರಾ ಎಂದು ಆಪಾದಿಸಲಾಗಿರುತ್ತದೆ.

ಈ ಮೇಲೆ ಹೇಳಿದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೊದ್ದೇಶದಿಂದ ಸಾಕ್ಷಿ-1 ರಿಂದ 11 ರವರಿಗೆ ತಮ್ಮ ಕೈ ಕಾಲುಗಳಿಂದ ಹೊಡೆದು, ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದರಿಂದ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾಂ. ದಂ.ಸಂ. ಕಲಂ 323 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ವಾದ ಅಪರಾಧ ಮಾಡಿರುತ್ತೀರಾ ಎಂದು ಆಪಾದಿಸಲಾಗಿರುತ್ತದೆ.

ಈ ಮೇಲೆ ಹೇಳಿದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೊದ್ದೇಶದಿಂದ ನಿಮ್ಮಲ್ಲಿಯ 1 ನೇ ಆರೋಪಿತನು ಕಲ್ಲಿನಿಂದ ಸಾಕ್ಷಿ-1 ರವರ ಎಡ ಮುಂಗೈಗೆ ಹೊಡೆದು, ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿದ್ದರಿಂದ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾಂ. ದಂ.ಸಂ. ಕಲಂ 326 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ವಾದ ಅಪರಾಧ ಮಾಡಿರುತ್ತೀರಾ ಎಂದು ಆಪಾದಿಸಲಾಗಿರುತ್ತದೆ.

ಈ ಮೇಲೆ ಹೇಳಿದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೊದ್ದೇಶದಿಂದ ನಿಮ್ಮಲ್ಲಿಯ 1 ನೇ ಆರೋಪಿತನು ಕಲ್ಲಿನಿಂದ ಸಾಕ್ಷಿ-2 ರವರ ಮುಖಕ್ಕೆ ಗುದ್ದಿದ್ದು , 2 ನೇ ಆರೋಪಿಯು ಕಲ್ಲಿನಿಂದ ಸಾಕ್ಷಿ-3 ರವರ ಬಲಗೈಗೆ ಹೊಡೆದು, ಸಾಕ್ಷಿ-4 ರವರ ಎಡ ಮುಂಗೈಗೆ ಕಲ್ಲಿನಿಂದ ಹೊಡೆದು, ಜಗಳ ಬಿಡಿಸಲು ಬಂದ ಸಾಕ್ಷಿ -6 ರಿಂದ 11 ರವರ ಮೇಲೆ ಕಲ್ಲುಗಳನ್ನು ತೂರಾಡಿ, ಸಾಕ್ಷಿ-5 ರವರ

ಬಲಗಾಲ ಹಿಮ್ಮಡಿಗೆ ತರಚಿದ ಗಾಯವಾಗಿದ್ದು, ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾಂ. ದಂ.ಸಂ. ಕಲಂ 324 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ವಾದ ಅಪರಾಧ ಮಾಡಿರುತ್ತೀರಾ ಎಂದು ಆಪಾದಿಸಲಾಗಿರುತ್ತದೆ.

ಈ ಮೇಲೆ ಹೇಳಿದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೊದ್ದೇಶದಿಂದ ಸಾಕ್ಷಿ-1 ರಿಂದ 11 ರವರ ಮೇಲೆ ಅಕ್ರಮ ಗುಂಪುಕಟ್ಟಿಕೊಂಡು ಬಂದು ಅದರ ಸದಸ್ಯರುಗಳಾಗಿದ್ದರಿಂದ, ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾಂ. ದಂ.ಸಂ. ಕಲಂ 147 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ವಾದ ಅಪರಾಧ ಮಾಡಿರುತ್ತೀರಾ ಎಂದು ಆಪಾದಿಸಲಾಗಿರುತ್ತದೆ.

ಈ ಮೇಲೆ ಹೇಳಿದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೊದ್ದೇಶದಿಂದ ಸಾಕ್ಷಿ-1 ರಿಂದ 11 ರವರ ಮೇಲೆ ಅಕ್ರಮ ಗುಂಪುಕಟ್ಟಿಕೊಂಡು ಬಂದು ಅದರ ಸದಸ್ಯರುಗಳಾಗಿ ಕೈಗಳಲ್ಲಿ ಕಲ್ಲುಗಳನ್ನು ಹಿಡಿದುಕೊಂಡು ಬಂದು ದೊಂಬಿ ಮಾಡಿದ್ದರಿಂದ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾಂ. ದಂ.ಸಂ. ಕಲಂ 148 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ವಾದ ಅಪರಾಧ ಮಾಡಿರುತ್ತೀರಾ ಎಂದು ಆಪಾದಿಸಲಾಗಿರುತ್ತದೆ.

ಈ ಮೇಲೆ ಹೇಳಿದ ದಿನ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಏಕೊದ್ದೇಶದಿಂದ ಸಾಕ್ಷಿ-1 ರಿಂದ 11 ರವರ ಜಮೀನಿನೊಳಗೆ ಅಕ್ರಮ ಪ್ರವೇಶ ಮಾಡಿದ್ದರಿಂದ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಭಾಂ. ದಂ.ಸಂ. ಕಲಂ 447 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ವಾದ ಅಪರಾಧ ಮಾಡಿರುತ್ತೀರಾ ಎಂದು ಆಪಾದಿಸಲಾಗಿರುತ್ತದೆ.

ಈ ಮೇಲೆ ಹೇಳಿದ ಆರೋಪಗಳ ಬಗ್ಗೆ ನೀವು ವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

ದಿಃ27-02-2019 ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

ಜಗಳೂರು.

C.C.No.

C.C.No.

ಆರೋಪಿಯು ವರ್ಗಾವಣೀಯ ಲಿಖಿತ ಕಾಯಿದೆ ಕಲಂ 138 ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಪ್ರಸ್ತುತ ಖಾಸಗಿ ದೂರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರಡಿಯಲ್ಲಿ ಫಿರ್ಯಾದನ್ನು ಸಲ್ಲಿಸಿರುತ್ತಾರೆ.

2. ಫಿರ್ಯಾದಿಯ ಸಂಕ್ಷಿಪ್ತ ವಿವರ ಈ ಕೆಳಕಂಡಂತೆ ಇರುತ್ತದೆ..

ಆರೋಪಿಯು ಫಿರ್ಯಾದಿದಾರರಿಗೆ ಪರಿಚಯಸ್ಥರು ಆಗಿರುತ್ತಾರೆ ಮತ್ತು ಸ್ನೇಹಿತರು ಆಗಿರುತ್ತಾರೆ. ಫಿರ್ಯಾದಿಯಿಂದ ಆರೋಪಿಯು ತನ್ನ ಮನೆತನದ ಖರ್ಚಿಗಾಗಿ ದಿಃ30-09-2013 ರಂದು ರೂ.1,50,000-00 ಗಳನ್ನು ಕೈಗಡ ಸಾಲವಾಗಿ ಪಡೆದುಕೊಂಡಿರುತ್ತಾರೆ. ಸದರಿ ಸಾಲವನ್ನು 3 ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಭರವಸೆ ನೀಡಿ ಸಾಲ ಪಡೆದ ದಿನಾಂಕದಂದು ಫಿರ್ಯಾದಿದಾರರ ಹಸೆರಿಗೆ ದಿಃ30-12-2013 ಎಂದು ದಿನಾಂಕವನ್ನು ನಮೂದಿಸಿದ ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್‌ನ 421974 ಸಂಖ್ಯೆಯ ಚೆಕ್ಕನ್ನು ಕೊಟ್ಟಿರುತ್ತಾರೆ. ಅದನ್ನು ದಿಃ30-12-2013 ರಂದು ಬ್ಯಾಂಕಿಗೆ ಹಾಜರುಪಡಿಸಿ ನಗಧೀಕರಿಸಿಕೊಳ್ಳಲು ತಿಳಿಸಿರುತ್ತಾರೆ. ಆರೋಪಿಯ ಮಾತಿನಂತೆ ಫಿರ್ಯಾದಿದಾರರು ತನ್ನ ಖಾತೆ ಇರುವ ಬ್ಯಾಂಕಿಗೆ ಆರೋಪಿ ನೀಡಿದ ಚೆಕ್ಕನ್ನು ಹಾಜರುಪಡಿಸಿದ್ದು, ಬ್ಯಾಂಕಿನವರು **Drawer's signature differ from pecimen given** ಎಂಬ ಹಿಂಬರಹವನ್ನು ನೀಡಿ ವಾಪಸ್ ಮಾಡಿರುತ್ತಾರೆ.

3. ಈ ವಿಷಯವನ್ನು ಪಿರ್ಯಾದಿದಾರರು ಆರೋಪಿಗೆ ತಿಳಿಸಿರುತ್ತಾರೆ. ನಂತರ ಆರೋಪಿಯು ಹಣವನ್ನು ಇಂದು ಕೊಡುತ್ತೇನೆ, ನಾಳೆ ಕೊಡುತ್ತೇನೆ ಎಂದು ಮುಂದೂಡುತ್ತಾ ಬಂದಿರುತ್ತಾರೆ. ನಂತರ ಫಿರ್ಯಾದಿದಾರರು ತನ್ನ ವಕೀಲರ ಮೂಲಕ ದಿಃ20-01-2014 ರಂದು ನೊಂದಾಯಿತ ಅಂಚೆ ಮೂಲಕ ನೋಟೀಸ್ ಕಳುಹಿಸಿರುತ್ತಾರೆ. ಆರೋಪಿಯು ಉದ್ದೇಶಪೂರ್ವಕವಾಗಿ ಸದರಿ ನೋಟೀಸನ್ನು ಪಡೆದುಕೊಂಡಿರುವುದಿಲ್ಲ ಮತ್ತು ಚೆಕ್ಕು ಬಾಬ್ತು ಹಣವನ್ನು ಪಾವತಿ ಮಾಡಿರುವುದಿಲ್ಲ. ಆದ್ದರಿಂದ ಆರೋಪಿಯು ವರ್ಗಾಣೆಯ ಲಿಖಿತ ಕಾಯಿದೆ ಕಲಂ 138 ರಡಿಯಲ್ಲಿ ಅಪರಾಧ ಎಸಗಿರುತ್ತಾರೆ ಎಂದು ಈ ಪ್ರಸ್ತುತ ದೂರನ್ನು ಫಿರ್ಯಾದಿದಾರರು ಆರೋಪಿಯ ವಿರುದ್ಧ ಸಲ್ಲಿಸಿರುತ್ತಾರೆ.

4. ಈ ನ್ಯಾಯಾಲಯವು ವರ್ಗಾವಣೆಯ ಲಿಖಿತ ಕಾಯಿದೆಯ ಅಡಿಯಲ್ಲಿ ಆರೋಪಿಸಿರುವ ಅಪರಾಧಕ್ಕೆ ಸಂಜ್ಞೆಯನ್ನು ತೆಗೆದುಕೊಂಡ ನಂತರ ಆರೋಪಿಗೆ ಸಮಸ್‌ನ್ನು ನೀಡಿತ್ತು ಆರೋಪಿಯು ತನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ

436 ರಡಿಯಲ್ಲಿ ಸಲ್ಲಿಸಿದ್ದರು. ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸಿ, ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿತ್ತು, ನಂತರ ವರ್ಗಾಣೆಯ ಲಿಖಿತ ಕಾಯಿದೆಯ ಕಲಂ 138 ರಡಿಯಲ್ಲಿ ಆರೋಪಿಸಿರುವ ಅಪರಾಧಕ್ಕಾಗಿ ಆರೋಪಿಗೆ ತಪ್ಪಿನ ವಾದವನ್ನು ಕನ್ನಡದಲ್ಲಿ ಓದಿ ಹೇಳಲಾಯಿತು. ಆರೋಪಿಯು ತಪ್ಪಿನ ವಾದವನ್ನು ನಿರಾಕರಿಸಿ ವಿಚಾರಣೆ ಆಗಲಿ ಎಂದು ಕೇಳಿಕೊಂಡಿರುತ್ತಾರೆ.

5. ಫಿರ್ಯಾದಿದಾರರು ತನ್ನ ಫಿರ್ಯಾದಿನಲ್ಲಿ ಹೇಳಿರುವ ಸಂಗತಿಗಳನ್ನು ನಿರೂಪಿಸುವ ಸಲುವಾಗಿ ತನ್ನನ್ನು ತಾನು ಪಿಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ಪಿಡಬ್ಲ್ಯೂ-1 ರವರು ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿಪಿ1 ರಿಂದ 7 ಎಂದು ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಫಿರ್ಯಾದಿದಾರರ ಪರವಾಗಿ ಬ್ಯಾಂಕಿನ ವ್ಯವಸ್ಥಾಪಕರು ಪಿಡಬ್ಲ್ಯೂ-2 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ.

6. ಫಿರ್ಯಾದಿದಾರರ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ಅಭಿಲೇಖಿಸಲಾಯಿತು. ಆರೋಪಿಯು ಸದರಿ ಹೇಳಿಕೆಯಲ್ಲಿ ಅಭಿಲೇಖಿಸಲಾದ ವಿವರಗಳನ್ನು ಅಲ್ಲಗಳೆಯುತ್ತಾ, ತಾನು ನಿರಪರಾಧಿ ಇರುವುದಾಗಿ ಹೇಳಿಕೆ ನೀಡಿರುತ್ತಾರೆ. ಆರೋಪಿಯು ಪ್ರತಿರಕ್ಷೆಯನ್ನು ನೀಡಿದ್ದು, ತನ್ನನ್ನು ತಾನು ಮೌಖಿಕವಾಗಿ ಡಿಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಡಿಡಬ್ಲ್ಯೂ-1 ರವರು ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿಡಿ-1 ರಿಂದ 3 ಎಂದು ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಆರೋಪಿಯ ಪರವಾಗಿ ಓಬಣ್ಣ ಮತ್ತು ದೇವರಾಜ ಎಂಬುವವರು ಹಾಜರಾಗಿ ತಮ್ಮನ್ನು ತಾವು ಡಿಡಬ್ಲ್ಯೂ-2 ಮತ್ತು 3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಹಾಗೆಯೇ ಆರೋಪಿಯ ಪರವಾಗಿ ಬ್ಯಾಂಕಿನ ವ್ಯವಸ್ಥಾಪಕರು ತನ್ನನ್ನು ತಾನು ಡಿಡಬ್ಲ್ಯೂ-4 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ.

7. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ವಿಸ್ತೃತವಾಗಿ ಆಲಿಸಲಾಯಿತು ಮತ್ತು

ನ್ಯಾಯಾಲಯದ ಸಮ್ಮುಖದಲ್ಲಿರುವ ಪ್ರಸ್ತುತ ದೂರಿಗೆ ಸಂಬಂಧಿಸಿದ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು.

8. ಈ ಕೆಳಕಂಡ ಅಂಶಗಳು ಈ ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತದೆ.

1. ಆರೋಪಿಯು ಸಾಲದ ಹಣಕ್ಕಾಗಿ ಫಿರ್ಯಾದಿದಾರರಿಗೆ ದಿಃ30-09-2013 ರಂದು ದಿಃ30-12-2013 ಎಂದು ನಮೂದಿಸಿದ 421974 ಸಂಖ್ಯೆಯ ಚೆಕ್ಕನ್ನು ರೂ,1,50,000-00 ಗಳಿಗೆ ನೀಡಿರುತ್ತಾರೆಯೇ? ಮತ್ತು ಸದರಿ ಚೆಕ್ಕನ್ನು ಫಿರ್ಯಾದಿದಾರರು ತನ್ನ ಖಾತೆ ಇರುವ ಬ್ಯಾಂಕಿಗೆ ನಗಧೀಕರಿಸಲು ಹಾಜರುಪಡಿಸಿದಾಗ ಸಹಿ ಹೋಲಿಕೆ ಆಗುತ್ತಿಲ್ಲ ಎಂದು ಹಿಂಬರಹವನ್ನು ನೀಡಿ ಅನಾಧರಿತವಾಗಿದೆ ಮತ್ತು ಫಿರ್ಯಾದಿಯು ದಿಃ 20-01-2014 ರಂದು ಆರೋಪಿಗೆ ನೋಟೀಸನ್ನು ನೀಡಿ ಚೆಕ್ಕಿನಲ್ಲಿ ಒಳಗೊಂಡಿರುವ ಹಣವನ್ನು 15 ದಿನಗಳಲ್ಲಿ ಪಾವತಿಸುವಂತೆ ಕೇಳಿಕೊಂಡಿರುತ್ತಾರೆಯೇ? ಮತ್ತು ಸದರಿ ನೋಟೀಸನ್ನು ಆರೋಪಿಯು ಉದ್ದೇಶಪೂರ್ವಕವಾಗಿ ತೆಗೆದುಕೊಂಡಿರುವುದಿಲ್ಲ ಮತ್ತು ಚೆಕ್ಕಿನ ಹಣವನ್ನು ಪಾವತಿಸಲು ವಿಫಲರಾದ ಕಾರಣ ವರ್ಗಾಣೆಯ ಲಿಖಿತ ಕಾಯಿದೆ ಕಲಂ 138 ರಡಿಯಲ್ಲಿ ಅಪರಾಧವನ್ನು ಎಸಗಿರುತ್ತಾರೆಯೇ?

2. ಮಾಡುವ ಆದೇಶ ಏನು?

9. ಮೇಲೆ ರಚಿಸಲಾದ ಅಂಶಗಳಿಗೆ ಈ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸಿರುತ್ತದೆ.

ಅಂಶ ನಂಃ 1 ಸಕರಾತ್ಮಕವಾಗಿ

ಅಂಶ ನಂಃ 2 ಅಂತಿಮ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿ.

ಃಃ ಕಾ ರ ಣ ಗ ಳು ಃಃ

10. ಅಂಶ ನಂಃ 1 - ಫಿರ್ಯಾದಿದಾರರ ಪ್ರಕಾರ ಆರೋಪಿಯು ತನ್ನ ಗೃಹಕೃತ್ಯದ ಖರ್ಚಿಗಾಗಿ ತನ್ನಿಂದ ರೂ.1,50,000-00 ಗಳನ್ನು ದಿಃ30-09-2013 ರಂದು ಸಾಲವಾಗಿ ಪಡೆದಿದ್ದು, ಅದರ ಭದ್ರತೆಗಾಗಿ ದಿಃ30-12-

2013 ಎಂದು ನಮೂದಿಸಿದ ಚೆಕ್ಕನ್ನು ಅದೇ ದಿನ ನೀಡಿರುತ್ತಾರೆ. ಸದರಿ ಚೆಕ್ಕನ್ನು ನಗಧೀಕರಣಕ್ಕೆ ಬ್ಯಾಂಕಿನಲ್ಲಿ ಹಾಜರುಪಡಿಸಿದಾಗ ಸದರಿ ಚೆಕ್ಕು ಅನಾಧರಿತವಾಗಿರುತ್ತದೆ ಎಂಬುದಾಗಿರುತ್ತದೆ. ಆದರೆ ಆರೋಪಿಯು ದೂರಿನಲ್ಲಿ ಹೇಳಿರುವ ಸಂಗತಿಗಳನ್ನು ನಿರಾಕರಿಸಿರುತ್ತಾರೆ.

11. ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 101 ಮತ್ತು 103 ರಂತೆ ಫಿರ್ಯಾದಿದಾರರು ತಾನು ಫಿರ್ಯಾದಿಯಲ್ಲಿ ಹೇಳಿರುವ ಸಂಗತಿಗಳನ್ನು ನಿರೂಪಿಸಲು ತನ್ನನ್ನು ತಾನು ಪಿಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಪಿಡಬ್ಲ್ಯೂ-1 ರವರು ತನ್ನ ಮುಖ್ಯ ವಿಚಾರಣೆಗಾಗಿ ಶಪಥ ಪತ್ರವನ್ನುಸಲ್ಲಿಸಿದ್ದು, ಸದರಿ ಶಪಥ ಪತ್ರದಲ್ಲಿ ಫಿರ್ಯಾದಿನಲ್ಲಿರುವ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ. ಪಿಡಬ್ಲ್ಯೂ-1 ರವರು ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿಪಿ-1 ರಿಂದ 7 ಎಂದು ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಫಿರ್ಯಾದಿದಾರರ ಪರವಾಗಿ ಬ್ಯಾಂಕನ ವ್ಯವಸ್ಥಾಪಕರಾದ ಹೆಚ್.ಬಿ. ನಿಂಗಪ್ಪ ಎಂಬುವವರು ಹಾಜರಾಗಿ ತನ್ನನ್ನು ತಾನು ಪಿಡಬ್ಲ್ಯೂ-2 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ಮೌಖಿಕವಾಗಿ ನುಡಿದಿದ್ದು, ಅದರಲ್ಲಿ ಫಿರ್ಯಾದಿದಾರರು ತಮ್ಮ ಬ್ಯಾಂಕಿನಲ್ಲಿ ಖಾತೆ ಹೊಂದಿರುವ ಬಗ್ಗೆ ನಿಪಿ-1 ಚೆಕ್ಕು ತಮ್ಮ ಬ್ಯಾಂಕಿಗೆ ಸಂಬಂಧಿಸಿದ ದಾಖಲೆ ಎಂಬುವುದಾಗಿ ನುಡಿದಿರುತ್ತಾರೆ.

12. ಆರೋಪಿಯು ತನ್ನ ಪ್ರತಿರಕ್ಷೆಗಾಗಿ ತನ್ನನ್ನು ತಾನು ಡಿಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು ತನ್ನ ಮುಖ್ಯ ವಿಚಾರಣೆಯನ್ನು ಮೌಖಿಕವಾಗಿ ನುಡಿದಿರುತ್ತಾರೆ. ಇವರು ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ನಿಡಿ-1 ರಿಂದ 3 ಎಂದು ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಆರೋಪಿಯ ಪರವಾಗಿ ಓಬಣ್ಣ ಮತ್ತು ದೇವರಾಜ ಎಂಬ ವ್ಯಕ್ತಿಗಳು ಹಾಜರಾಗಿ ತಮ್ಮನ್ನು ತಾವು ಡಿಡಬ್ಲ್ಯೂ-2 ಮತ್ತು 3 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಫಿರ್ಯಾದಿದಾರರು ಮತ್ತು ಆರೋಪಿಯು ಅಂಗಡಿಯಲ್ಲಿ ಜೊತೆಗೆ ಇರುತ್ತಿದ್ದರು, ಆರೋಪಿಯು ಹೊರಗಡೆ ಹೋಗಬೇಕಾದರೆ ಫಿರ್ಯಾದಿಯನ್ನು ತಮ್ಮ ಅಂಗಡಿಯಲ್ಲಿ ಬಿಟ್ಟು ಹೋಗುತ್ತಿದ್ದರು ಎಂಬುವುದಾಗಿ ನುಡಿದಿರುತ್ತಾರೆ. ಆರೋಪಿಯ ಪರವಾಗಿ ಪಿ. ರಾಮಪ್ಪ ಎಂಬ ಬ್ಯಾಂಕಿನ ವ್ಯವಸ್ಥಾಪಕರು ತಮ್ಮನ್ನು ತಾವು ಡಿಡಬ್ಲ್ಯೂ-4 ಎಂದು ಮೌಖಿಕವಾಗಿ ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ಇವರು ತನ್ನ ಮುಖ್ಯ ವಿಚಾರಣೆಯಲ್ಲಿ ನಿಪಿ-2 ಎಂದು

ತಮ್ಮ ಬ್ಯಾಂಕಿನಿಂದ ಹಿಂಬರಹ ನೀಡಿದ ಬಗ್ಗೆ ನುಡಿದಿರುತ್ತಾರೆ.

13. ಪಿಡಬ್ಲ್ಯೂ-1 ರವರು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ನಿಪಿ-1 ದಾಖಲೆಯು ದಿಃ30-12-2013 ರ ಚೆಕ್ಕು ಆಗಿರುತ್ತದೆ. ಅದರಲ್ಲಿ ರೂ. 1,50,000-00 ಎಂದು ನಮೂದು ಆಗಿರುತ್ತದೆ. ನಿಪಿ-1(ಎ) ಆರೋಪಿಯ ಸಹಿ ಆಗಿರುತ್ತದೆ. ನಿಪಿ-2 ಮತ್ತು 3 ದಾಖಲೆಗಳು ಬ್ಯಾಂಕಿನವರು ನೀಡಿದ ಹಿಂಬರಹ ಆಗಿರುತ್ತದೆ. ನಿಪಿ-2 ರಲ್ಲಿ ಎರಡು ಕಾರಣಗಳನ್ನು ಮತ್ತು ನಿಪಿ-3 ರಲ್ಲಿ 1 ಕಾರಣವನ್ನು ನೀಡಿ ಹಿಂಬರಹ ನೀಡಿರುತ್ತಾರೆ. ನಿಪಿ-4 ದಾಖಲೆಯು ದಿಃ20-01-2014 ರ ತಿಳುವಳಿಕೆ ನೋಟೀಸನ ಕಛೇರಿ ಪ್ರತಿಯಾಗಿದ್ದು , ಫಿರ್ಯಾದಿದಾರರು ತನ್ನ ವಕೀಲರ ಮೂಲಕ ಆರೋಪಿಗೆ ಕಳುಹಿಸಿದ ನೋಟೀಸ್ ಆಗಿರುತ್ತದೆ. ನಿಪಿ-5 ದಾಖಲೆಯು ಅಂಚೆ ರಶೀದಿಯಾಗಿದ್ದು, ನಿಪಿ-6 ದಾಖಲೆಯು ಜಾರಿಯಾಗದೇ ವಾಪಸ್ ಆದ ಅಂಚೆ ಲಕೋಟೆಯಾಗಿರುತ್ತದೆ. ನಿಪಿ-6(ಎ) ದಾಖಲೆಯು ನಿಪಿ-6 ರ ಅಂಚೆ ಲೆಕೋಟೆಯಲ್ಲಿದ್ದ ನೋಟೀಸ್‌ನ ಪ್ರತಿಯಾಗಿರುತ್ತದೆ. ನಿಪಿ-7 ದಾಖಲೆಯು ಅಂಚೆ ಲಕೋಟೆಯಾಗಿರುತ್ತದೆ. ಅದೇ ರೀತಿ ಡಿಡಬ್ಲ್ಯೂ-1 ರವರು ನಿಡಿ-1 ಎಂದು ಕೆನರಾ ಬ್ಯಾಂಕ್‌ನ ಪಾಸ್ ಪುಸ್ತಕವನ್ನು, ನಿಡಿ-2 ಮತ್ತು 3 ಎಂದು ಕೋರಿಯರ್ ರಶೀದಿಗಳನ್ನು ಹಾಜರುಪಡಿಸಿರುತ್ತಾರೆ.

14. ಆರೋಪಿಯು ತನ್ನ ಹೇಳಿಕೆಯನ್ನು ಮೌಖಿಕವಾಗಿ ನುಡಿದಿದ್ದು, ಅದರಲ್ಲಿ ಫಿರ್ಯಾದಿಯು ತನಗೆ ರೂ.1,50,000-00 ಗಳನ್ನು ಕೊಡಬೇಕೆಂದು ಅದನ್ನು ತಾನು ವಾಪಸ್ ಕೇಳಿದಾಗ ತನ್ನ ಬಳಿ 2 ಚೆಕ್ಕು ಇದ್ದು ಅದನ್ನು ಬ್ಯಾಂಕಿಗೆ ಹಾಜರುಪಡಿಸುವುದಾಗಿ ತಿಳಿಸಿರುತ್ತೇನೆಂದು ನುಡಿದಿರುತ್ತಾರೆ. ಆದರೆ ಸದರಿ ಸಂಗತಿಗಳ ಸಂಬಂಧವಾಗಿ ಪಿಡಬ್ಲ್ಯೂ-1 ರವರನ್ನು ಪಾಟೀಸವಾಲು ಮಾಡುವ ಸಮಯದಲ್ಲಿ ಅದರ ಬಗ್ಗೆ ಯಾವುದೇ ಪ್ರಶ್ನೆಗಳನ್ನು ಕೇಳಿರುವುದಿಲ್ಲ. ಹಾಗೆಯೇ ಡಿಡಬ್ಲ್ಯೂ-1 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ತಾನು ಓಬಣ್ಣ ಎಂಬುವವರಿಗೆ 2008 ರಲ್ಲಿ ರೂ.50,000-00 ಗಳನ್ನು ಕೊಟ್ಟಿರುವುದಾಗಿ ತಾನು ಹೇಳಿದ ಕಾರಣ ಓಬಣ್ಣರವರು 70,000-00 ಗಳನ್ನು ಫಿರ್ಯಾದುದಾರರ ಬಳಿ ಕೊಟ್ಟಿರುತ್ತೇನೆಂದು ನುಡಿದಿರುತ್ತಾರೆ, ಈ ಯಾವುದೇ ಸಂಗತಿಗಳನ್ನು ಪಿಡಬ್ಲ್ಯೂ-1 ರವರ ಪಾಟೀಸವಾಲಿನಲ್ಲಿ ಆರೋಪಿಯ ಪರ ವಕೀಲರು

ಕೇಳಿರುವುದಿಲ್ಲ. ಮುಖ್ಯ ವಿಚಾರಣೆಯಲ್ಲಿ ಮಾತ್ರ ಹೊಸ ಪ್ರತಿರಕ್ಷೆಯನ್ನು ಆರೋಪಿಯು ತೆಗೆದುಕೊಂಡಿರುತ್ತಾರೆ. ನಾನು ಒಟ್ಟು ಕುಟುಂಬದ ಸ್ವತ್ತಿಗೆ ಸಂಬಂಧಿಸಿದ ಜಮೀನನ್ನು ಪಡೆದುಕೊಳ್ಳದೇ ಹಣವನ್ನುಪಡೆದುಕೊಂಡು ಪ್ರತ್ಯೇಕವಾಗಿ ಇರುತ್ತೇನೆ ಅಂದರೆ ಸರಿ , ಈ ಹಣದಿಂದ ಹಲವಾರು ಪರಿಚಯಸ್ಥ ಜನರಿಗೆ ಸಾಲ ನೀಡಿ ಅದರಿಂದ ಬಂದ ಬಡ್ಡಿ ಹಣದಲ್ಲಿ ಜೀವನ ನಡೆಸುತ್ತಿದ್ದೇನೆ ಅಂದರೆ ಸರಿ ಅಲ್ಲ ೨ ಎಂಬ ಪ್ರಶ್ನೆಯನ್ನು ಆರೋಪಿ ಪರ ವಕೀಲರು ಪಿಡಬ್ಲ್ಯೂ-1 ರವರನ್ನು ಕೇಳಿರುತ್ತಾರೆ. ಮುಂದುವರೆದು, ಅದೇ ಪಾಟೀಸವಾಲಿನಲ್ಲಿ ನಿಮಗೆ ಜೀವನ ನಡೆಸಲು ತುಂಬಾ ಕಷ್ಟ ಇದೆ ಎಂಬ ಪ್ರಶ್ನೆಯನ್ನು ಕೇಳಿರುತ್ತಾರೆ. ಅಂದರೆ ಈ ಎರಡೂ ವಾಕ್ಯಗಳಲ್ಲಿ ದ್ವಂದ್ವತೆ ಇರುತ್ತದೆ.

15. ಆರೋಪಿ ಪರ ವಕೀಲರು ಪಿಡಬ್ಲ್ಯೂ-1 ರವರನ್ನು ಪಾಟೀಸವಾಲು ಮಾಡಿದಾಗ, ಅದರಲ್ಲಿ ಆರೋಪಿಯು ನನಗೆ ಹಣವನ್ನು ಕೊಡುವುದು ಮತ್ತು ತೆಗೆದುಕೊಳ್ಳುವ ವ್ಯವಹಾರವನ್ನು ಮಾಡುತ್ತಿದ್ದರು ಅಂದರೆ ಸರಿಯಲ್ಲ ೨ ಎಂಬ ಪ್ರಶ್ನೆಯನ್ನು ಕೇಳಿದ್ದು ಅಂದರೆ ಫಿರ್ಯಾದಿ ಮತ್ತು ಆರೋಪಿಯ ನಡುವೆ ಹಣದ ವ್ಯವಹಾರ ಆಗಿರುವ ಬಗ್ಗೆ ಆರೋಪಿಯು ಒಪ್ಪಿಕೊಂಡಿರುವುದು ಕಂಡುಬರುತ್ತದೆ. ಹಾಗೆಯೇ ಅದೇ ಪಾಟೀಸವಾಲಿನಲ್ಲಿ ಆರೋಪಿ ಮತ್ತು ಫಿರ್ಯಾದಿಯ ನಡುವೆ ವಿಶ್ವಾಸದಿಂದ ಇದ್ದ ಬಗ್ಗೆ ಪ್ರಶ್ನೆ ಕೇಳಿರುತ್ತಾರೆ. ಅದನ್ನು ಪಿಡಬ್ಲ್ಯೂ-1 ರವರು ಒಪ್ಪಿಕೊಂಡಿರುತ್ತಾರೆ. ಅಂದರೆ ಫಿರ್ಯಾದಿ ಮತ್ತು ಆರೋಪಿಯ ನಡುವೆ ವಿಶ್ವಾಸ ಇದ್ದು, ಸ್ಪಷ್ಟವಾಗಿ ತಿಳಿದು ಬರುತ್ತದೆ. ಆರೋಪಿಯ ಪ್ರಕಾರ ಫಿರ್ಯಾದಿದಾರರು ತನ್ನ ಅಂಗಡಿಯ ಡ್ರಾಯರ್ ಒಳಗಡೆ ಇಟ್ಟಿದ್ದ ಚೆಕ್ಕುಗಳನ್ನು ತೆಗೆದುಕೊಂಡು ಈ ದೂರನ್ನು ಸಲ್ಲಿಸಿರುತ್ತಾರೆ ಎಂಬುವುದಾಗಿರುತ್ತದೆ. ಆದರೆ ಈ ಸಂಬಂಧವಾಗಿ ಪೋಲೀಸ್ ಠಾಣೆಯಲ್ಲಿ ಆರೋಪಿಯು ಫಿರ್ಯಾದಿದಾರರ ವಿರುದ್ಧ ದೂರು ನೀಡಿರುವುದಿಲ್ಲ. ಈ ಬಗ್ಗೆ ಬ್ಯಾಂಕಿಗೆ ದೂರು ನೀಡಿರುವುದಾಗಿ, ಆರೋಪಿಯು ನಿಡಿ-2 ಮತ್ತು 3 ಎಂದು ಕೋರಿಯರ್ ರಶೀದಿಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳನ್ನು ನೀಡಿ ಅದರಲ್ಲಿ ಕೇವಲ ವ್ಯವಸ್ಥಾಪಕರು ಎಂಬ ವಿಳಾಸ ಇದೆಯೇ ಹೊರತು ಯಾವ ವ್ಯವಸ್ಥಾಪಕರು ಎಂಬ ಬಗ್ಗೆ ನಮೂದು ಇರುವುದಿಲ್ಲ. ಅದನ್ನು ನೋಡಿದಾಗ, ಆರೋಪಿಯು ಹೇಳುವ ಪ್ರತಿರಕ್ಷೆಗೂ ಸದರಿ ಹೇಳಿಕೆಗೂ ಯಾವುದೇ ಸಂಬಂಧ ಇಲ್ಲದೇ ಇರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ.

16. ಆರೋಪಿಯು ನಿಪಿ-1 ಚೆಕ್ಕಿನಲ್ಲಿ ಒಂದು ರೀತಿಯಲ್ಲಿ ಮತ್ತು ನ್ಯಾಯಾಲಯಕ್ಕೆ ಕೊಟ್ಟಿರುವ ವಕಾಲತ್‌ನಲ್ಲಿ ಒಂದು ರೀತಿಯಲ್ಲಿ ಸಹಿ ಮಾಡಿರುತ್ತಾರೆ ಎಂಬ ಪ್ರಶ್ನೆಯನ್ನು ಆರೋಪಿ ಪರ ವಕೀಲರು ತನ್ನ ಪಾಟೀಸವಾಲಿನಲ್ಲಿ , ನನ್ನ ಮುಖ್ಯ ವಿಚಾರಣೆಯಲ್ಲಿ ಮಾಡಿದ ಸಹಿಗೂ ಮತ್ತು ನನ್ನ ವಕಾಲತ್ ನಾಮದಲ್ಲಿ ಮಾಡಿದ ಸಹಿಗೂ ವ್ಯತ್ಯಾಸ ಇದೇ ಅಂದರೆ ಸರಿ ಎಂದು ೨ ಉತ್ತರಿಸಿರುತ್ತಾರೆ. ಅಂದರೆ ಆರೊಪಿಯು ಬೇರೆ ಬೇರೆ ದಾಖಲೆಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಸಹಿ ಮಾಡುತ್ತಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ನಿಪಿ-1 ರಲ್ಲಿ ಇರುವ ನಿಪಿ-1(ಎ) ಸಹಿ ಮತ್ತು ಇತರೇ ಒಪ್ಪಿತ ಸಹಿಗಳನ್ನು ಮೇಲ್ನೋಟಕ್ಕೆ ನೋಡಿದಾಗ ಒಂದೇ ರೀತಿಯಲ್ಲಿರುವುದು ಕಂಡುಬರುತ್ತದೆ.

17. ಪಿಡಬ್ಲ್ಯೂ-1 ರವರನ್ನು ಪಾಟೀಸವಾಲು ಮಾಡುವಾಗ ಆರೋಪಿ ಪರ ವಕೀಲರು ಆರೋಪಿಯು ಫಿರ್ಯಾದಿಯ ಬಳಿ ರೂ.60,000-00 ಗಳನ್ನು ಈ ಹಿಂದೆ ಸಾಲವಾಗಿ ಪಡೆದುಕೊಂಡು ಅದನ್ನು ಓಬಣ್ಣ ಎಂಬುವವರ ಮೂಲಕ ತೀರುವಳಿ ಮಾಡಿಸಿರುತ್ತಾರೆ ಎಂಬ ಪ್ರಶ್ನೆಯನ್ನು ಕೇಳಿರುತ್ತಾರೆ. ಅಂದರೆ ಈ ಸಂಗತಿಯನ್ನು ನೋಡಿದಾಗ ಆರೋಪಿ ಮತ್ತು ಫಿರ್ಯಾದಿಯ ನಡುವೆ ಹಣದ ವ್ಯವಹಾರವು ನಡೆದಿರುವ ಬಗ್ಗೆ ತಿಳಿದು ಬರುತ್ತದೆ. ಪಿಡಬ್ಲ್ಯೂ-1 ರವರ ಪಾಟೀಸವಾಲಿನಲ್ಲಿ ಆರೋಪಿಯು ಮತ್ತೊಂದು ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ. ಅದರಲ್ಲಿ ಫಿರ್ಯಾದಿಯ ತಮ್ಮನ ಮೂಲಕ ನಡೆಯುವ ವ್ಯವಹಾರಗಳಿಗೆ ಸಂಬಂಧಿಸಿದಂತೆ ಈ ಸುಳ್ಳು ದೂರನ್ನು ಸಲ್ಲಿಸುವ ಪ್ರವೃತ್ತಿ ಫಿರ್ಯಾದಿಯು ಬೆಳಸಿಕೊಂಡಿರುತ್ತಾರೆ ಎಂಬ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾರೆ. ಅಂದರೆ ಆರೋಪಿಯು ಹಲವಾರು ಪ್ರತಿರಕ್ಷೆಯನ್ನು ಪಾಟೀಸವಾಲಿನಲ್ಲಿ ಮತ್ತು ತನ್ನ ಮುಖ್ಯ ವಿಚಾರಣೆಯಲ್ಲಿ ತೆಗೆದುಕೊಂಡಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಆದ್ದರಿಂದ ಸದರಿ ಪ್ರತಿರಕ್ಷೆ ಯನ್ನು ನಂಬಲು ಸಾಧ್ಯ ಇರುವುದಿಲ್ಲ. ಪಿಡಬ್ಲ್ಯೂ-2 ರವರು ತನ್ನ ಪಾಟೀಸವಾಲಿನಲ್ಲಿ ನಾನ್ ಸೀಟಿಯಸ್ ಚೆಕ್ಕು ಜಗಳೂರಿನಲ್ಲಿ ಚಾಲ್ತಿಯಲ್ಲಿ ಇರುವುದಿಲ್ಲವೆಂದು ಗ್ರಾಮೀಣ ಬ್ಯಾಂಕ್ ರವರು ನಿಪಿ-2 ರಲ್ಲಿ ಕಾರಣಗಳಿಗೆ ಚೆಕ್ಕು ಅಮಾನ್ಯಗೊಂಡ ಬಗ್ಗೆ ತಿಳಿಸಿರುತ್ತಾರೆ. ಆದರೆ ನಾವು ಒಂದು ಕಾರಣ ಹೇಳಿರುತ್ತೇವೆ ಎಂಬವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಡಿಡಬ್ಲ್ಯೂ-4 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ನಿಪಿ-2 ಹಿಂಬರಹ

ನೀಡಿದ ಅಧಿಕಾರಿ ಕಲಿಕ ಅಧಿಕಾರಿಯಾಗಿದ್ದು, ಅವರಿಗೆ ತಿಳಿಯದೇ ಹಿಂಬರಹದಲ್ಲಿ ಎರಡು ಕಾರಣಗಳನ್ನು ನಮೂದು ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಅದೇ ರೀತಿ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ತಿಳಿದು ಬಂದ ನಂತರ ಸಹಿಯನ್ನು ಹೋಲಿಕೆ ಮಾಡುವುದಿಲ್ಲ ಎಂದು ತಿಳಿಸಿರುತ್ತಾರೆ. ಈ ಸಂಗತಿಯನ್ನು ನೋಡಿದಾಗ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಹಿಂಬರಹದ ಮೂಲಕ ಚೆಕ್ಕು ಅಮಾನ್ಯಗೊಂಡಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ.

18. ಡಿಡಬ್ಲ್ಯೂ-1 ರವರನ್ನು ಫಿರ್ಯಾದಿದಾರರ ಪರ ವಕೀಲರು ಪಾಟೀಸವಾಲು ಮಾಡಿದ್ದು, ಅದರಲ್ಲಿ ಫಿರ್ಯಾದಿಗೆ ರೂ.1,50,000-00 ಗಳನ್ನು ಯಾವಾಗ ಮತ್ತು ಎಲ್ಲಿ ಕೊಟ್ಟಿರುತ್ತೇನೆಂದು ಕೇಳಿದ ಪ್ರಶ್ನೆಗೆ ಡಿಡಬ್ಲ್ಯೂ-1 ರವರು ನೇರವಾಗಿ ಉತ್ತರಿಸಿರುವುದಿಲ್ಲ. ಅಂದರೆ ಈ ಸಂಗತಿಯನ್ನು ನೋಡಿದಾಗ, ಆರೋಪಿಯು ಕೇವಲ ಮಾತಿನ ಮೂಲಕ ಫಿರ್ಯಾದಿಯ ಮೇಲಿನ ವಿಶ್ವಾಸದಿಂದ ಫಿರ್ಯಾದಿ 1,50,000-00 ವನ್ನು ಕೊಡುವಂತೆ ಕೇಳಿರುವುದು ಇದರಿಂದ ತಿಳಿದು ಬರುತ್ತದೆ. ಆರೋಪಿಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ಮಂಜುನಾಥ ಎಂಬುವವರು ಚೆಕ್ಕು ಅಮಾನ್ಯಗೊಂಡ ಬಗ್ಗೆ ದೂರು ಸಲ್ಲಿಸಿ ಅದು ರಾಜೀ ಮೂಲಕ ಮುಕ್ತಾಯವಾಗಿರುವ ಬಗ್ಗೆ ಡಿಡಬ್ಲ್ಯೂ -1 ರವರು ತನ್ನ ಪಾಟೀಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಅಂದರೆ ಆರೋಪಿಯು ಚೆಕ್ಕು ಅಮಾನ್ಯಗೊಂಡ ಪ್ರಕರಣಗಳಲ್ಲಿ ಬೇರೆ ದೂರಿನಲ್ಲಿ ಆರೋಪಿಯಾಗಿದ್ದ ಬಗ್ಗೆ ಸ್ಪಷ್ಟವಾಗಿ ತಿಳಿದು ಬರುತ್ತದೆ. ಡಿಡಬ್ಲ್ಯೂ-2 ರವರು ತನ್ನ ಮುಖ್ಯ ವಿಚಾರಣೆಯಲ್ಲಿ ತಾನು 11 ವರ್ಷಗಳ ಹಿಂದೆ ಫಿರ್ಯಾದಿಯಿಂದ ರೂ.50,000-00 ಗಳನ್ನು ಪಡೆದುಕೊಂಡು ಆ ನಂತರ ವಾಪಸ್ ನೀಡಿದ ಬಗ್ಗೆ ನುಡಿದಿರುತ್ತಾರೆ. ಮುಂದುವರೆದು, ಆರೋಪಿ ಮತ್ತು ಫಿರ್ಯಾದಿಯ ನಡುವೆ ಹಣದ ವ್ಯವಹಾರ ಆಗಿರುವ ಬಗ್ಗೆ ತನಗೆ ಏನು ಗೊತ್ತಿರುವುದಿಲ್ಲವೆಂದು ನುಡಿದಿರುತ್ತಾರೆ. ಇವರನ್ನು ಪಿರ್ಯಾದಿಯ ಪರ ವಕೀಲರು ಪಾಟೀಸವಾಲು ಮಾಡಿದ್ದು, ಅದರಲ್ಲಿ ಫಿರ್ಯಾದಿ ಮತ್ತು ಆರೋಪಿಯ ಸ್ವಂತ ವ್ಯವಹಾರಗಳ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲವೆಂದು ತನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲವೆಂದು ಒಪ್ಪಿಕೊಂಡಿರುತ್ತಾರೆ. ಅಂದರೆ ಈ ಸಾಕ್ಷಿಯ ಸಾಕ್ಷ್ಯದಿಂದ ಆರೋಪಿಗೆ ಯಾವುದೇ ಅನುಕೂಲ ಇರುವುದಿಲ್ಲ. ಡಿಡಬ್ಲ್ಯೂ-2 ರವರನ್ನು ಪಿರ್ಯಾದಿಯ ಪರ ವಕೀಲರು ಪಾಟೀಸವಾಲು ಮಾಡಿದ್ದು ಅದರಲ್ಲಿ ಆರೋಪಿಯ

ಅಂಗಡಿಯಲ್ಲಿ ಫಿರ್ಯಾದಿಯು ಕುಳಿತ್ತಿದ್ದನ್ನು ನೋಡಿರುವುದನ್ನು ಬಿಟ್ಟರೆ ಬೇರೆ ವಿಚಾರಗಳು ತನಗೆ ಗೊತ್ತಿರುವುದಿಲ್ಲವೆಂದು ಆರೋಪಿ ಮತ್ತು ಫಿರ್ಯಾದಿಯ ನಡುವೆ ಈ ಪ್ರಕರಣದ ಸಂಬಂಧವಾಗಿ ಏನು ವ್ಯವಹಾರ ಆಗಿರುತ್ತದೆ ತನಗೆ ಗೊತ್ತಿರುವುದಿಲ್ಲವೆಂದು ನುಡಿದಿರುತ್ತಾರೆ.

19. ಆರೋಪಿಯ ಪ್ರಕಾರ 2014 ರಲ್ಲಿ ನಿಪಿ-1 ಚೆಕ್ಕು ಚಾಲ್ತಿಯಲ್ಲಿ ಇರಲಿಲ್ಲ ಎಂಬುದಾಗಿರುತ್ತದೆ. ಆದರೆ ಡಿಡಬ್ಲ್ಯೂ -4 ಬ್ಯಾಂಕಿನ ವ್ಯವಸ್ಥಾಪಕರ ಪ್ರಕಾರ 2014 ರಲ್ಲಿ ನಿಪಿ-1 ಚೆಕ್ಕು ಚಾಲ್ತಿಯಲ್ಲಿ ಇರುತ್ತದೆ ಎಂಬುದಾಗಿರುತ್ತದೆ. ಆದ್ದರಿಂದ ಡಿಡಬ್ಲ್ಯೂ-4 ರವರ ಹೇಳಿಕೆಯನ್ನು ನಂಬಬೇಕಾಗಿರುತ್ತದೆ. ಏಕೆಂದರೆ, ಇವರು ಸಂಬಂಧಿಸಿದ ಬ್ಯಾಂಕ್‌ನ ವ್ಯವಸ್ಥಾಪಕರು ಆರೋಪಿರುತ್ತಾರೆ. ಆರೋಪಿಯು ತನ್ನ ಪ್ರತಿರಕ್ಷೆಯಲ್ಲಿ ನಿಪಿ-1 ಚೆಕ್ಕು ಕಳ್ಳತನವಾಗಿದ್ದು ಈ ಬಗ್ಗೆ ತಾನು ಬ್ಯಾಂಕಿಗೆ ದೂರು ನೀಡಿದ್ದಾಗಿ ತಿಳಿಸಿರುತ್ತಾರೆ. ಆದರೆ ಸದರಿ ಬ್ಯಾಂಕಿನ ವ್ಯವಸ್ಥಾಪಕರು ಆದ ಡಿಡಬ್ಲ್ಯೂ-4 ರವರು ಈ ಬಗ್ಗೆ ಯಾವುದೇ ಪ್ರಶ್ನೆಯನ್ನು ಕೇಳಿರುವುದಿಲ್ಲ. ಆದ್ದರಿಂದ ಆರೋಪಿಯ ಪ್ರತಿರಕ್ಷೆಯಲ್ಲಿ ಸಂಶಯ ಉಂಟಾಗುತ್ತದೆ. ಆರೋಪಿಯು ಹಲವು ರೀತಿಯ ಪ್ರತಿರಕ್ಷೆಗಳನ್ನು ತೆಗೆದುಕೊಂಡಿರುವುದರಿಂದ ಅದನ್ನು ನಂಬಲು ಸಾಧ್ಯ ಇರುವುದಿಲ್ಲ ಮತ್ತು ಅದಕ್ಕೆ ಪೂರಕವಾದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಪಿಡಬ್ಲ್ಯೂ-1 ರವರ ಪಾಟೀಸವಾಲಿನಲ್ಲಿ ತೆಗೆದುಕೊಳ್ಳದ ಪ್ರತಿರಕ್ಷೆಯನ್ನು ಹೊಸದಾಗಿ ತನ್ನ ಮುಖ್ಯ ವಿಚಾರಣೆಯಲ್ಲಿ ಡಿಡಬ್ಲ್ಯೂ-1 ರವರು ತೆಗೆದುಕೊಂಡಿರುತ್ತಾರೆ. ಇದನ್ನು ನಂಬಲು ಸಾಧ್ಯ ಇರುವುದಿಲ್ಲ. ಆರೋಪಿಯ ಪ್ರಕಾರ ದಿಃ08-01-2013 ರಂದು ನಿಪಿ-2 ರಂತೆ ಬ್ಯಾಂಕ್ ನವರು ಹಿಂಬರಹ ಕೊಟ್ಟಿರುವ ಬಗ್ಗೆ ನಿಪಿ-7 ರಲ್ಲಿ ನಮೂದು ಆಗಿರುತ್ತದೆ. ಆದರೆ ಫಿರ್ಯಾದಿಯು ತನ್ನ ದೂರಿನಲ್ಲಿ ದಿಃ08-01-2014 ರಂದು ನಮೂದು ಮಾಡಿರುತ್ತಾರೆ. ಅದರಲ್ಲಿ ಯಾವ ಸಂಗತಿಗಳನ್ನು ನಂಬಬೇಕಾಗಿರುತ್ತದೆ ಎಂಬುವುದಾಗಿ ಆರೋಪಿ ಪರ ವಕೀಲರು ತನ್ನ ವಾದ ಮಂಡನೆಯಲ್ಲಿ ತಿಳಿಸಿರುತ್ತಾರೆ. ಆದರೆ ಪಿಡಬ್ಲ್ಯೂ-1 ರವರು ಹಾಜರುಪಡಿಸಿರುವ ತಿಳುವಳಿಕೆ ನೋಟೀಸ್‌ನಲ್ಲೂ ಸಹ ದಿಃ08-01-2013 ಎಂದೇ ನಮೂದು ಇರುತ್ತದೆ. ಆದರೆ ಆಕಸ್ಮಿಕವಾಗಿ ಬೆರಳಚ್ಚು ಮಾಡಿಸುವಾಗ, ದೂರಿನಲ್ಲಿ ತಪ್ಪಾಗಿ ದಿನಾಂಕ ನಮೂದು ಆಗಿರುತ್ತದೆ. ಕೇವಲ ಅದೇ ಒಂದು ಕಾರಣದಿಂದ ದೂರು ಊರ್ಜಿತ ಅಲ್ಲ ಎಂದು ತೀರ್ಮಾನಕ್ಕೆ ಬರಲು ಸಾಧ್ಯ ಇರುವುದಿಲ್ಲ.

20. ಫಿರ್ಯಾದಿದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಆರೋಪಿಯು ನಿಪಿ-1 ಚೆಕ್ಕು ತನ್ನದೇ ಎಂದು ಒಪ್ಪಿಕೊಂಡಿರುತ್ತಾರೆ. ಆದರೆ ಅದರಲ್ಲಿರುವ ಸಹಿಯನ್ನು ನೇರವಾಗಿ ಒಪ್ಪದೇ ಇದ್ದರೂ ಸಾಕ್ಷ್ಯಗಳನ್ನು ನೋಡಿದಾಗ ನಿಪಿ-1(ಎ) ಸಹಿಯನ್ನು ತನ್ನದು ಎಂದು ಆರೋಪಿಯು ಒಪ್ಪಿಕೊಂಡಿರುವುದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಆರೋಪಿಯು ತನ್ನ ಪ್ರತಿರಕ್ಷೆಯಲ್ಲಿ ಹೇಳಿರುವ ಸಂಗತಿಗಳನ್ನು ಸಮರ್ಥಿಸಿಕೊಳ್ಳಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಫಿರ್ಯಾದಿನಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತು ಪಡಿಸಲು ಸಫಲರಾಗಿರುತ್ತಾರೆ. ಆದ್ದರಿಂದ ಆರೋಪಿಯು ವರ್ಗಾವಣೆಯ ಲಿಖಿತ ಕಾಯಿದೆ ಕಲಂ 138 ರಡಿಯಲ್ಲಿ ಅಪರಾಧ ಮಾಡಿರುವುದಾಗಿ ಆರೋಪಿಯನ್ನು ಶಿಕ್ಷಿಸಬೇಕೆಂದು ವಾದಿಸಿರುತ್ತಾರೆ.

21. ಆರೋಪಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ , ಆರೋಪಿ ಮತ್ತು ಫಿರ್ಯಾದಿ ನಡುವೆ ಯಾವುದೇ ಹಣದ ವ್ಯವಹಾರ ಆಗಿರುವುದಿಲ್ಲ , ಆರೋಪಿಯು ತನ್ನ ಅಂಗಡಿಯಲ್ಲಿ ಇಟ್ಟಿದ್ದ ಚೆಕ್ಕನ್ನು ಫಿರ್ಯಾದಿಯು ಕಳವು ಮಾಡಿ ಈ ಫಿರ್ಯಾದನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಆರೋಪಿಯನ್ನು ನಿರ್ದೋಷಿ ಎಂದು ಬಿಡುಗಡೆಗೊಳಿಬೇಕೆಂದು ಕೋರಿರುತ್ತಾರೆ.

22. ಉಭಯ ಪಕ್ಷಗಾರರು ಮಂಡಿಸಿದ ವಾದವನ್ನು ಆಲಿಸಿದ ನಂತರ ಈ ನ್ಯಾಯಾಲಯವು ಪಿಡಬ್ಲ್ಯೂ-1 ರವರು ಹಾಜರುಪಡಿಸಿರುವ ನಿಪಿ-1 ರಿಂದ 7 ದಾಖಲೆಗಳನ್ನು ಪರಿಶೀಲಿಸಿದಾಗ ಆರೋಪಿಯು ಫಿರ್ಯಾದಿಯಿಂದ ಪಡೆದುಕೊಂಡ ಸಾಲದ ಹಣಕ್ಕೆ ಸಂಬಂಧವಾಗಿ ನಿಪಿ-1 ಚೆಕ್ಕನ್ನು ನೀಡಿರುವುದಾಗಿ ತಿಳಿದು ಬರುತ್ತದೆ. ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂದು ಬ್ಯಾಂಕಿನವರು ಹಿಂಬರಹ ನೀಡಿರುವುದು ತಿಳಿದು ಬರುತ್ತದೆ. ಹಾಗೆಯೇ ಫಿರ್ಯಾದಿಯು ತನ್ನ ವಕೀಲರ ಮೂಲಕ ಆರೋಪಿಗೆ ತಿಳುವಳಿಕೆ ನೋಟೀಸನ್ನು ನೀಡಿರುತ್ತಾರೆ. ಆದರೆ ಆರೋಪಿಯು ತನ್ನ ಪ್ರತಿರಕ್ಷೆಯನ್ನು ತೆಗೆದುಕೊಂಡ ಸಂಗತಿಗಳನ್ನು ಸಮರ್ಥಿಸಿಕೊಳ್ಳಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆರೋಪಿಯು ತಾನು ಫಿರ್ಯಾದಿಯಿಂದ ಪಡೆದುಕೊಂಡ ಸಾಲದ ಮೊತ್ತಕ್ಕೆ ಸಂಬಂಧವಾಗಿ ಅದರ ಭದ್ರತೆಗಾಗಿ ನಿಪಿ-1 ಚೆಕ್ಕನ್ನು ನೀಡಿರುವುದು ಸಾಕ್ಷ್ಯದಿಂದ

ಸ್ಪಷ್ಟವಾಗಿ ಪುಷ್ಠೀಕರಿಸಿರುತ್ತಾರೆ. ಆರೋಪಿಯು ಸಾಲದ ಮೊತ್ತವನ್ನು ಫಿರ್ಯಾದಿದಾರರಿಗೆ ಪಾವತಿಸುವ ಹೊಣೆಗಾರಿಕೆಯನ್ನು ಹೊಂದಿರುತ್ತಾರೆ ಎಂಬ ಅಭಿಪ್ರಾಯಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ.

23. ಚೆಕ್ಕನ್ನು ಮುಕ್ತ ಸಮ್ಮತಿಯಿಂದ ನೀಡಿದ ವಿಚಾರವನ್ನು ನಿರೂಪಿಸಿದ ತಕ್ಷಣ ಈ ನ್ಯಾಯಾಲಯವು ವರ್ಗಾವಣೆಯ ಲಿಖಿತ ಕಾಯಿದೆಯ ಕಲಂ 118 ಮತ್ತು 139 ರ ಅಡಿಯಲ್ಲಿ ಇರುವ ಕಾನೂನಿನ ಪೂರ್ವ ಭಾವನೆಗೆ ಬರಬೇಕಾಗಿರುತ್ತದೆ. ಸದರಿ ಕಾಯಿದೆಯ ಕಲಂ 118(ಎ) ರಂತೆ ಪ್ರತಿಯೊಂದು ವರ್ಗಾವಣೆಯ ಲಿಖಿತ ದಾಖಲೆಯನ್ನು ಪ್ರತಿಫಲ ಸ್ವೀಕೃತಿಯ ವಿಚಾರವಾಗಿ ನೀಡಲಾಗಿರುತ್ತದೆ. ಎನ್ನುವ ಕಾನೂನಿನ ಪೂರ್ವಭಾವನೆಯನ್ನು ಈ ನ್ಯಾಯಾಲಯವು ತೆಗೆದುಕೊಳ್ಳಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಆರೋಪಿಯು ನಿಪಿ-1 ರ ಚೆಕ್ಕನ್ನು ಸಾಲದ ಉದ್ದೇಶಕ್ಕಾಗಿ ನೀಡಿರುವುದರಿಂದ ಸದರಿ ಕಾಯಿದೆಯ ಕಲಂ 118(ಎ) ರಂತೆ ಫಿರ್ಯಾದುದಾರರ ಪರವಾಗಿ ಕಾನೂನಿನ ಪೂರ್ವಭಾನೆಯನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಅದೇ ರೀತಿ ಕಲಂ 139 ರ ಅಡಿಯಲ್ಲಿ ಚೆಕ್ಕನ್ನು ತಮ್ಮ ಬಾದ್ಯತೆಯನ್ನು ತೀರಿಸುವ ವಿಚಾರವಾಗಿ ನೀಡಿರುತ್ತಾರೆ ಎನ್ನುವ ಕಾನೂನಿನ ಪೂರ್ವಭಾವನೆ ಇರುತ್ತದೆ. ಪ್ರಸ್ತುತ ಸಾಲದ ಹಣಕ್ಕೆ ಸಂಬಂಧವಾಗಿ ನೀಡಿರುತ್ತಾರೆ ಎಂದು ಈ ನ್ಯಾಯಾಲಯವು ಸದರಿ ಕಾಯಿದೆಯ ಕಲಂ 139 ರಡಿಯಲ್ಲಿ ಕಾನೂನಿನ ಪೂರ್ವ ಭಾವನೆಗೆ ಬಂದಿರುತ್ತದೆ.

24. ಫಿರ್ಯಾದಿದಾರರು ವರ್ಗಾವಣೆಯ ಲಿಖಿತ ಕಾಯಿದೆಯ ಕಲಂ 138 ರ ಅಡಿಯಲ್ಲಿ ನಿರೂಪಿಸಬೇಕಾದ ಎಲ್ಲಾ ಅಂಶಗಳನ್ನು ನಿರೂಪಿಸಿರುತ್ತಾರೆ. ಅದೇ ರೀತಿ ಸದರಿ ಕಾಯಿದೆಯ ಕಲಂ 118 ಮತ್ತು 139 ರ ಅಡಿಯಲ್ಲಿ ಕಾನೂನಿನ ಪೂವರ್ಭಾವನೆಯು ಫಿರ್ಯಾದಿದಾರರ ಪರವಾಗಿ ಇರುತ್ತದೆ. ಆದರೆ ಸದರಿ ಕಾನೂನಿನ ಪೂವರ್ಭಾವನೆಯು ಖಂಡಿಸಬಹುದಾದ ಪೂರ್ವಭಾವನೆ ಆಗಿರುತ್ತದೆ. ಅಂದರೆ ಆರೋಪಿಯು ಸೂಕ್ತ ಸಾಕ್ಷ್ಯಧಾರಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸುವ ಮುಖಾಂತರ ಸದರಿ ಕಾನೂನಿನ ಪೂರ್ವಭಾವನೆಯನ್ನು ಖಂಡಿಸುವ ಅವಕಾಶವನ್ನು ಹೊಂದಿದ್ದರೂ ಸಹ ಆರೋಪಿಯು ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಹಾಜರುಪಡಿಸಲು ವಿಫಲರಾಗಿರುತ್ತಾರೆ. ಆದುದರಿಂದ ಸದರಿ ಕಾಯಿದೆಯ ಕಲಂ 118 ಮತ್ತು 139 ರಡಿಯಲ್ಲಿ ಫಿರ್ಯಾದುದಾರರ ಪರವಾಗಿ ಇರುವ ಕಾನೂನಿನ ಪೂರ್ವ ಭಾವನೆಯು ಹಾಗೆಯೇ

ಉಳಿದುಕೊಂಡಿರುವುದರಿಂದ , ಈ ನ್ಯಾಯಾಲಯವು ಆರೋಪಿಯು ನಿಪಿ-1 ರ ಚೆಕ್ಕಿನಲ್ಲಿ ಒಳಗೊಂಡಿರುವ ಹಣವನ್ನು ಪಾವತಿಸಲು ಬಾಧ್ಯರಾಗಿರುತ್ತಾರೆ ಎನ್ನುವ ಅಭಿಪ್ರಾಯಕ್ಕೆ ಬಂದಿರುತ್ತದೆ.

25. ಈ ಮೇಲಿನ ಚರ್ಚೆಯೊಂದಿಗೆ ಈ ನ್ಯಾಯಾಲಯವು ಫಿರ್ಯಾದುದಾರರು ತಮ್ಮ ಮೌಖಿಕ ದಾಖಲಾತಿ ಸಾಕ್ಷ್ಯದ ಮುಖಾಂತರ ಆರೋಪಿಯು ತಾನು ಕಾನೂನಾತ್ಮಕವಾಗಿ ಪಾವತಿಸಬೇಕಾದ ಸಾಲದ ಮೊತ್ತಕ್ಕೆ ಸಂಬಂಧವಾಗಿ ನಿಪಿ-1 ಚೆಕ್ಕನ್ನು ನೀಡಿರುತ್ತಾರೆ ಎಂದು ರುಜುವಾತು ಆಗಿರುತ್ತದೆ. ಆರೋಪಿಯು ತನ್ನ ಪ್ರತಿರಕ್ಷೆಯಲ್ಲಿ ಹೇಳಿರುವ ಸಂಗತಿಗಳನ್ನು ನಿರೂಪಿಸಲು ವಿಫಲರಾಗಿದ್ದು, ಫಿರ್ಯಾದಿದಾರರಿಗೆ ಸಾಲವನ್ನು ಮರುಪಾವತಿ ಮಾಡುವ ಬಾಧ್ಯತೆಯನ್ನು ಹೊಂದಿರುತ್ತಾರೆ ಎನ್ನುವ ಅಭಿಪ್ರಾಯಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ.

26. ಆರೋಪಿ ಅಪರಾಧ ಎಸಗಿರುವುದರಿಂದ ಚೆಕ್ಕಿನಲ್ಲಿ ಒಳಗೊಂಡಿರುವ ರೂ.1,50,000-00 ಗಳ ಜೊತೆಗೆ ರೂ.50,000-00 ಗಳನ್ನು ಸೇರಿಸಿ ಒಟ್ಟು ರೂ. 2,00,000-00 ಗಳನ್ನು ಜುಲ್ಮಾನೆಯಾಗಿ ಪಾವತಿಸಬೇಕು ಎನ್ನುವ ಅಭಿಪ್ರಾಯಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆ ಕಲಂ 357 ರಡಿಯಲ್ಲಿ ಫಿರ್ಯಾದಿದಾರರು ಜುಲ್ಮಾನೆ ಮೊತ್ತದಲ್ಲಿ ರೂ.1,90,000-00 ಗಳನ್ನು ಪಡೆಯಲು ಅರ್ಹರಾಗಿರುತ್ತಾರೆ ಮತ್ತು ಈ ಪ್ರಕರಣವು ಸುಮಾರು 4 ವರ್ಷಗಳಿಗಿಂತ ಹೆಚ್ಚು ಸಮಯ ನಡೆದಿರುವುದರಿಂದ ಜುಲ್ಮಾನೆ ಮೊತ್ತದ ಉಳಿಕೆ ರೂ. 10,000-00 ಗಳನ್ನು ರಾಜ್ಯ ಸರ್ಕಾರಕ್ಕೆ ಪಾವತಿ ಮಾಡುವಂತೆ ಆದೇಶ ಮಾಡುವುದು ಅವಶ್ಯಕವಾಗಿರುತ್ತದೆ ಎಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ. ಈ ಮೇಲಿನ ಎಲ್ಲಾ ಕಾರಣಗಳಿಂದ ಈ ನ್ಯಾಯಾಲಯವು 1 ನೇ ಅಂಶವನ್ನು ಸಕರಾತ್ಮಕವಾಗಿ ಉತ್ತರಿಸಿದೆ.

27. ಅಂಶ ನಂಃ 2 ಈ ಮೇಲಿನ 1 ನೇ ಅಂಶದಲ್ಲಿ ಚರ್ಚಿಸಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

- ಆದೇಶ -

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(2) ರಡಿಯಲ್ಲಿ ನೀಡಿರುವ ಅಧಿಕಾರವನ್ನು

ಚಲಾಯಿಸಿ ಆರೋಪಿಯು ವರ್ಗಾವಣೀಯ ಲಿಖಿತ ಕಾಯಿದೆಯ ಕಲಂ 138 ರಡಿಯಲ್ಲಿ ಮಾಡಿರುವ ಅಪರಾಧಕ್ಕಾಗಿ ಅಪರಾಧಿ ಎಂದು ಈ ನ್ಯಾಯಾಲಯವು ನಿರ್ಣಯಿಸಿದೆ.

ಆರೋಪಿಯು ಜುಲ್ಮಾನೆ ಮೊತ್ತವಾದ ರೂ.**2,00,000-00** ಗಳನ್ನು ಪಾವತಿಸಲು ಆದೇಶವನ್ನು ನೀಡಿದೆ. ಒಂದು ವೇಳೆ ಆರೋಪಿಯು ಸದರಿ ಜುಲ್ಮಾನೆ ಹಣವನ್ನು ಪಾವತಿಸಲು ವಿಫಲರಾದರೆ ಆರು ತಿಂಗಳ ಸಾಮಾನ್ಯ ಕಾರಾಗೃಹ ವಾಸದ ಶಿಕ್ಷೆಯನ್ನು ಅನುಭವಿಸತಕ್ಕದ್ದು ಎಂದು ಆದೇಶಿಸಿದೆ.

ಮುಂದುವರೆದು, ಫಿರ್ಯಾದಿದಾರನು ಜುಲ್ಮಾನೆ ಮೊತ್ತದಲ್ಲಿ ರೂ. 1,90,000-00 ಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 357 ರಡಿಯಲ್ಲಿ ಪರಿಹಾರವನ್ನು ಪಡೆಯಲು ಅರ್ಹರು ಎಂದು ಆದೇಶಿಸಿರುತ್ತದೆ ಮತ್ತು ಉಳಿದ ರೂ.10,000-00 ಗಳ ಜುಲ್ಮಾನೆ ಹಣವನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಲು ಆದೇಶಿಸಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 363 ರ ಅಡಿಯಲ್ಲಿ ಆರೋಪಿಗೆ ತೀರ್ಪಿನ ದೃಢೀಕೃತ ಪ್ರತಿಯನ್ನು ಉಚಿತವಾಗಿ ನೀಡುವಂತೆ ಕಛೇರಿಗೆ ಆದೇಶಿಸಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, 2019 ನೇ ಇಸವಿ ಜನವರಿ 4 ನೇ ದಿನಾಂಕದಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಲಾಯಿತು.)

(ಮಹೇಂದ್ರ ಎಂ.)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜಗಳೂರು.

::ಅನುಬಂಧ::

<u>ಫಿರ್ಯಾದಿದಾರರ ಪರವಾಗಿ ವಿಚಾರಿಸಲಾದ ಸಾಕ್ಷಿದಾರರ ಪಟ್ಟಿ</u>

ಪಿಡಬ್ಲ್ಯೂ-1 ಹೆಚ್.ಟಿ. ಉಮಾಪತಿ.
ಪಿಡಬ್ಲ್ಯೂ-2 ಹೆಚ್. ಬಿ. ನಿಂಗಪ್ಪ.

C.C.No.

ಆರೋಪಿತನ ಪರವಾಗಿ ವಿಚಾರಿಸಲಾದ ಸಾಕ್ಷಿದಾರರ ಪಟ್ಟಿ

ಡಿ ಡಬ್ಲ್ಯೂ-1 ಹುಲಿಗೆಪ್ಪ.
ಡಿ ಡಬ್ಲ್ಯೂ-2 ಓಬಯ್ಯ.
ಡಿ ಡಬ್ಲ್ಯೂ-3 ದೇವರಾಜ.
ಡಿ ಡಬ್ಲ್ಯೂ-4 ಪಿ. ರಾಮಪ್ಪ.

ಫಿರ್ಯಾದಿದಾರನ ಪರವಾಗಿ ಗುರತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ

ನಿಪಿ - 1	ಚೆಕ್ಕು .
ನಿಪಿ - 2 ಮತ್ತು 3	ಹಿಂಬರಹಗಳು.
ನಿಪಿ - 4	ತಿಳುವಳಿಕೆ ನೋಟೀಸ್ .
ನಿಪಿ - 5	ಅಂಚೆ ರಶೀದಿ.
ನಿಪಿ - 6	ಅಂಚೆ ಲಕೋಟೆ .
ನಿಪಿ - 7	ಕೋರಿಯರ್ ರಶೀದಿ.

ಆರೋಪಿತನ ಪರವಾಗಿ ಗುರತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ

ನಿಡಿ - 1	ಬ್ಯಾಂಕ್ ಪಾಸ್ ಪುಸ್ತಕ.
ನಿಡಿ - 2 ಮತ್ತು 3	ಕೋರಿಯರ್ ರಶೀದಿಗಳು.

(ಮಹೇಂದ್ರ ಎಂ.)
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜಗಳೂರು.